77 (214) ಶ್ರೀ ಗಂಗಾಧರ್ ನಾಗೇಶ್ ಭಟ್ (ಕಾರವಾರ) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಜೋಯಿಡಾ ತಾಲ್ಲೂಕಿನ ಕುಣಬಿ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ,

ಆ) ಹಾಗಿದ್ದಲ್ಲಿ, ಇದನ್ನು ಯಾವಾಗ ಜಾರಿಗೊಳಿಸಲಾಗುವುದು ?

ಶ್ರೀ ಬಾಲಚಂದ್ರ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) ಈ ಜಾತಿಯನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸಲು ಅಗತ್ಯವಿರು ಮಾನದಂಡಗಳಾದ 'ಅಸ್ಪೃಶ್ಯತೆ ಆಚರಣೆ, ಸಾಮಾಜಿಕ ಸ್ಥಿತಿಗತಿ ಇತ್ಯಾದಿಗಳ ಬಗ್ಗೆ ಅಧ್ಯಯನ ಮಾಡಿ ಎಥ್ನೋಗ್ರಾಫಿಕ್ ವರದಿ ಕಳುಹಿಸಿಕೊಡಲು ಜಿಲ್ಲಾಧಿಕಾರಿ ಉತ್ತರ ಕನ್ನಡ ಜಿಲ್ಲೆ ಇವರನ್ನು ಸಮಾಜ ಕಲ್ಯಾಣ ಆಯುಕ್ತರು ಕೋರಿದ್ದರೆ ವರದಿ ಬಂದನಂತರ ಕರ್ನಾಟಕ ಅನುಸೂಚಿತ ಜಾತಿ ಮತ್ತು ಅನುಸೂಚಿತ 'ಬುಡಕಟ್ಟುಗಳ ಆಯೋಗದಿಂದ ಶಿಫಾರಸ್ಸು ಪಡೆದು ಶಿಫಾರಸ್ಸಿನ ಅನ್ವಯ ಸೂಕ್ತ ನಿರ್ಧಾರ ಕೈಗೊಳ್ಳಬೇಕಾಗಿರುತ್ತದೆ

78 (195) ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಜಿರಾದ್) ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದ ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ 2006ರ ಆಯವ್ಯಯದಲ್ಲಿ ಮಂಡಿಸಲಾದ ಕಾರ್ಯಕ್ರಮಗಳ ವಿವರಗಳೇನು , (ಜಿಲ್ಲಾವಾರು ವಿವರಗಳನ್ನು ಒದಗಿಸುವುದು) ,

ಆ) ಆಯವ್ಯಯದಲ್ಲಿ ಪ್ರಕಟಿಸಿರುವ ಕಾರ್ಯಕ್ರಮಗಳಿಗೆ ಅಗತ್ಯವಿರುವ ಹಣದ ಮೊತ್ತವೆಷ್ಟು ,

ಇ) ಈ ಪೈಕಿ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಹಣವನ್ನು ಯಾವ ಯಾವ ಕಾರ್ಯಕ್ರಮಗಳಿಗಾಗಿ ಬಿಡುಗಡೆ ಮಾಡಲಾಗಿದೆ ,

ಈ) ಈ ಬಗ್ಗೆ ಇಲ್ಲಿಯವರೆವಿಗೆ ಸಾಧಿಸಿರುವ ಪ್ರಗತಿ ಏನು , (ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು) ?

ಶ್ರೀ ಇಲ್ಯಾಬ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು)

ಅ) ಅಲ್ಪಸಂಖ್ಯಾತರ ಇಲಾಖೆ ವತಿಯಿಂದ ರಾಜ್ಯವಲಯ ಕಾರ್ಯಕ್ರಮಗಳು

1 ಶಾದಿಮಹಲ್/ಸಮುದಾಯ ಭವನಗಳ ನಿರ್ಮಾಣ

2 ಅಲ್ಪಸಂಖ್ಯಾತರಿಗಾಗಿ ಹಾಸ್ಟಲ್ ಕಟ್ಟಡಗಳ ನಿರ್ಮಾಣ

3 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ನಿರ್ಮಾಣ

4 ಅಲ್ಪಸಂಖ್ಯಾತರ ಸಂಸ್ಥೆಗಳಿಂದ ವಿದ್ಯಾರ್ಥಿ ನಿಲಯ ಕಟ್ಟಡಗಳ ನಿರ್ಮಾಣ

5 ಅಲ್ಪಸಂಖ್ಯಾತರಿಗಾಗಿ ಪೀರ